**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**S.C No.: 25/2017**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ **1**
ಸಿ.ಡಬ್ಲ್ಯೂ ನಂಃ **1**
ಸಾಕ್ಷಿಯನ್ನು ದಿನಾಂಕಃ **20-12-2022**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಕನಕಪ್ಪ |
| ತಂದೆಯ ಹೆಸರು | ಃ | ಮರಿಯಪ್ಪ |
| ವಯಸ್ಸು | ಃ | 66 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸ ಸ್ಥಳ | ಃ | ವಣಗೇರಿ |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ನಮ್ಮ ತಾಯಿಯ ಹೆಸರು ಹನುಮಮ್ಮ. ಬಸಪ್ಪ ನನ್ನ ಮಾವ. ಶಿವಪ್ಪ ನನ್ನ ಅಳಿಯ. ಶಿವಪ್ಪನಿಗೆ 6 ಮಂದಿ ಮಕ್ಕಳು. ಮೃತ ಮಂಜುಳಾ ಹಿರಿಯ ಮಗಳು. ಆಕೆಯನ್ನು ಸಂಗಪ್ಪ ಅವರಿಗೆ ಕೊಟ್ಟು ಮದುವೆ ಮಾಡಿತ್ತು. ಅವರಿಗೆ ಇಬ್ಬರು ಮಕ್ಕಳು. ಮಂಜುಳಾ ಆಶಾ ಕಾರ್ಯಕರ್ತೆಯಾಗಿ ಕುಷ್ಟಗಿಯಲ್ಲಿ ಕೆಲಸ ಮಾಡುತ್ತಿದ್ದಳು. ಗರ್ಭಿಣಿ ಹೆಣ್ಣುಮಕ್ಕಳನ್ನು ದವಾಖಾನೆಗೆ ಕರೆದುಕೊಂಡು ಹೋಗುತ್ತಿದ್ದಳು. ಆಕೆ ಫೋನಿನಲ್ಲಿ ಹೆಚ್ಚು ಮಾತನಾಡುತ್ತಿದ್ದಳು.

ದಿಃ 16-3-2016 ರಂದು ನಾವು ಊರಿನಲ್ಲಿದ್ದಾಗ ಬೆಳಿಗ್ಗೆ 10 ಗಂಟೆಗೆ ಕುರುಬನಾಳ ಗ್ರಾಮದ ಗುಡ್ಡದಲ್ಲಿ ಒಂದು ಶವವನ್ನು ಸುಟ್ಟಿದ್ದಾರೆ ಮತ್ತು ಆಶಾ ಕಾರ್ಯಕರ್ತೆ ಇರಬಹುದು ಎಂದು ನಮಗೆ ಫೋನು ಮಾಡಿ ತಿಳಿಸಿದರು, ನಾವು ಹೋಗಿ ನೋಡಿದೆವು. ಆ ಶವ ಮಂಜುಳಾಳದ್ದಾಗಿತ್ತು. ಅಲ್ಲಿ ಮಗ್ಗುಲಲ್ಲಿ ಚಾಪೆ, ಫೋಟೋ ಬಿದ್ದಿದ್ದವು, ಶಿವಪ್ಪ ಗೋಡಿಹಾಳನ ಫೋಟೋ ಇದ್ದವು. ನಂತರ ನಾವು ಕುಷ್ಟಗಿ ಪೊಲೀಸ ಠಾಣೆಯಲ್ಲಿ ದೂರು ಕೊಟ್ಟಿದ್ದು ಅದನ್ನು ನಿಪಿ 1 ಎಂದು, ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು.

ನಂತರದಲ್ಲಿ ಪೊಲೀಸರ ಮುಂದೆ ಶವದ ಬಗ್ಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ, ನಂತರ ಪೊಲೀಸರು ಶವ ಪಂಚನಾಮೆಯನ್ನು ಮಾಡಿದ್ದು, ಆಗ ನಾನು ಅಲ್ಲಿ

ಹಾಜರಿದ್ದೆ. ಈ ಬಗ್ಗೆ ಫೋಟೋವನ್ನು ತೆಗೆದಿದ್ದು ಅದನ್ನು ನಿಪಿ 2 ಎಂದು ಗುರುತಿಸಲಾಯಿತು. 1ನೇ ಆರೋಪಿ ಆಶಾ ಕಾರ್ಯಕರ್ತೆ ಕೆಲಸಕ್ಕೆ ಅರ್ಜಿ ಕೊಟ್ಟಿದ್ದು, ಆರೋಪಿ ಮತ್ತು ಮಂಜುಳಾ ಅವರ ನಡುವೆ ಜಗಳ ಬಂದಿದ್ದು, ಮಂಜುಳಾ ಗುಂಡಮ್ಮ ಅವರ ಮನೆಗೆ ಹೋಗಿದ್ದಾಗ ಯಾವುದೋ ವಿಷ ಹಾಕಿ ಕುಡಿಸಿದ್ದು, ನಂತರ ಟಾವೆಲ್ಲನಿಂದ ಆಕೆಯನ್ನು ಕೊಲೆ ಮಾಡಿದ್ದಾಗಿ ಪೊಲೀಸರ ಮುಂದೆ ಹೇಳಿದ್ದರು ಎಂದು ತಿಳಿಯಿತು. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಮತ್ತು ಮರುಹೇಳಿಕೆ ಕೊಟ್ಟಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಗುರುತಿಸುತ್ತಾರೆ. 1ನೇ ಆರೋಪಿ 2ನೇ ಆರೋಪಿ ಜೊತೆ ಕೂಡಿ ಈ ಕೆಲಸ ಮಾಡಿದ್ದಾಳೆಂದು ಗೊತ್ತಾಯಿತು.

<u>ಪಾಟೀ ಸವಾಲು ಃ ಆರೋಪಿತರ ಪರ ವಕೀಲರಿಂದ</u>

ಕೋರಿಕೆಯ ಮೇರೆಗೆ ಪಾಟೀಸವಾಲನ್ನು ಮುಂದೂಡಲಾಯಿತು.

(ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಉಕ್ತ ಉಲ್ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಶ್ರೀಮತಿ ಬಿ. ಎಸ್ ರೇಖಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ